| | |
|---|---|
| ಪ್ರಾಸಾ | 01 |
| ಚಾಸಾ | 01 |

ಕರ್ನಾಟಕ ಸರ್ಕಾರ (ಸಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ:57)
ನಮೂನೆ ಸಂಖ್ಯೆ 4
(ಸಿವಿಲ್)

## 1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಬಳ್ಳಾಪುರ

## ಸತ್ರ ಪ್ರಕರಣ ಸಂಖ್ಯೆ: 100/2024

**ದಿನಾಂಕ: 20.08.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಿತು.**

| | | |
|---|---|---|
| ಸಾಕ್ಷಿದಾರರ ಹೆಸರು | : | ಸುಧಾಕರ್ |
| ತಂದೆಯ ಹೆಸರು | : | ರಾಮಕೃಷ್ಣಪ್ಪ |
| ವಯಸ್ಸು | : | 30 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸಸ್ಥಳ | : | ನಡುವನಹಳ್ಳಿ |

**ಮುಖ್ಯ ವಿಚಾರಣೆ: ಸಾರ್ವಜನಿಕ ಅಭಿಯೋಜಕರಿಂದ:-**

1. ನ್ಯಾಯಾಲಯದ ಮುಂದಿರುವ ಆರೋಪಿತರು ಹಾಗೂ ವಿ.ಸಿ.ಮುಖಾಂತರ ಹಾಜರುಪಡಿಸಿರುವ 2 ಮತ್ತು 7 ನೇ ಆರೋಪಿತರು ನಮ್ಮ ಸಂಬಂಧಿಕರು. 7 ನೇ ಆರೋಪಿ ನನ್ನ ಚಿಕ್ಕಪ್ಪನ ಮಗ. ಸಂಬಂಧದಲ್ಲಿ ತಮ್ಮ ಆಗುತ್ತಾನೆ. ಚಾಸಾ-2 ನನ್ನ ತಂದೆ-ರಾಮಕೃಷ್ಣಪ್ಪ, ಚಾಸಾ-3-ಲಕ್ಷ್ಮಿದೇವಮ್ಮ ನನ್ನ ಸೊದರ ಅತ್ತೆ, ಚಾಸಾ-4 ಸರೋಜಮ್ಮ ನನ್ನ ತಾಯಿ, ಚಾಸಾ-5-ಅರ್ಚನ ನನ್ನ ಹೆಂಡತಿ, ಚಾಸಾ-6 ಮಮತ- ನನ್ನ ಅತ್ತಿಗೆ, ಚಾಸಾ-7-ಹನುಮಂತರಾಯಪ್ಪ ನನ್ನ ಮಾವ.

| | |
|---|---|
| ಪ್ರಾಸಾ | 01 |
| ಚಾಸಾ | 01 |

2. ನಮಗೂ ಮತ್ತು ಆರೋಪಿತರಿಗೂ ಆಗಾಗ್ಗೆ ಸರ್ವೆ ನಂ: 43, ನಡುವಿನಹಳ್ಳಿ ಗ್ರಾಮಕ್ಕೆ ಸಂಬಂಧಿಸಿದಂತೆ ಆಗಾಗ ಗಲಾಟೆಗಳಾಗುತ್ತಿತ್ತು. ನನ್ನ ತಂದೆಯ ಹೆಸರಿನಲ್ಲಿರುವಂತಹ ಜಮೀನು ಪೋಡಿ ಮಾಡಲು ಹೋದಾಗ ಆರೋಪಿತರು ಅದಕ್ಕೆ ಬಿಡುತ್ತಿರಲಿಲ್ಲ. ದಿ: 18.08.2024 ರಂದು ಬೆಳಿಗ್ಗೆ 7.30 ರ ಸಮಯದಲ್ಲಿ ನನ್ನ ಚಿಕ್ಕಪ್ಪನಾದ ನಂಜುಂಡಪ್ಪ ಮತ್ತು ಅತ್ತೆಯವರಾದ ಲಕ್ಷ್ಮಿದೇವಮ್ಮ ರವರು ರಾಮಾಂಜಿನಪ್ಪ ಮತ್ತು ರಾಧಮ್ಮರವರ ಮನೆಯ ಬಳಿ ಜಮೀನಿನ ವಿಚಾರವಾಗಿ ಮಾತನಾಡಲು ಬಂದಿದ್ದರು. ಆಗ ನನ್ನ ಅತ್ತೆ ಕೋರ್ಟ್ ನಲ್ಲಿದ್ದ ಜಮೀನಿನ ವಿಚಾರ ಮಾತನಾಡಲು ಬಂದಿದ್ದರು. ನನ್ನ ಚಿಕ್ಕಪ್ಪ ಕೋರ್ಟ್ ನಲ್ಲಿ ಕೇಸ್ ನಡೆಸುತ್ತಿದ್ದರು. ಎಲ್ಲಾ ಖರ್ಚ್ ನ್ನು ಅವರೆ ಭರಿಸುತ್ತಿದ್ದರು, ಖರ್ಚು ಭರಿಸಲು ಸಾಧ್ಯವಾಗದೇ ಇದ್ದು, ಸದರಿ ಜಮೀನನ್ನು ಮಾರಾಟ ಮಾಡಿ ಬಂದ ಹಣವನ್ನು ಎಲ್ಲಾ ಹಂಚಿಕೊಳ್ಳೋಣ ಎಂದು ಮಾತನಾಡಲು ಬಂದಿದ್ದರು. ರಾಧಮ್ಮ, ಮಂಜುನಾ, ರಾಮಾಂಜಿನಪ್ಪ ರವರು ಗಲಾಟೆ ಮಾಡಿ, ಅವಾಚ್ಯ ಶಬ್ದಗಳಿಂದ ಅವರನ್ನು ಹೊಡೆಯಲು ಬಂದಿದ್ದು, ಆಗ ನಾವೇ ಅವರನ್ನು ಸಮಾಧಾನ ಮಾಡಿರುತ್ತೇವೆ. ನಮ್ಮ ಚಿಕ್ಕಪ್ಪನಾದ ನಂಜುಂಡಪ್ಪರವರನ್ನು ಸಮಾಧಾನ ಮಾಡಿ ವಾಪಸ್ಸು ಕಳುಹಿಸಿರುತ್ತೇವೆ. ನಾನು ಕಳುಹಿಸಿದ್ದಕ್ಕೆ ನೀನು ಏಕೆ ಸಪೋರ್ಟ್ ಮಾಡುತ್ತೀಯಾ ಎಂದು ಒಮ್ಮೇಲೆ ಗಲಾಟೆ ಮಾಡಿರುತ್ತಾರೆ. ಮತ್ತೆ

| | |
|---|---|
| ಪ್ರಾಸಾ | 01 |
| ಚಾಸಾ | 01 |

ನಾವು ಸಮಾಧಾನ ಮಾಡಿಕೊಂಡು ಹೊಲದ ಬಳಿ ಹೋಗಿರುತ್ತೇವೆ. ನಂತರ ನನ್ನ ಹೆಂಡತಿ ಅರ್ಚನ ಮೇಲೆ ದೊಣ್ಣೆಗಳನ್ನು ಹಿಡಿದುಕೊಂಡು ಗಲಾಟೆ ಮಾಡಲು ಬಂದಿದ್ದಾರೆ ಎಂದು ನನಗೆ ಫೋನ್ ಮಾಡಿ ತಿಳಿಸಿದರು. ಕೂಡಲೆ ನಾನು, ನನ್ನ ಚಿಕ್ಕಪ್ಪನನ್ನು ಕರೆದುಕೊಂಡು ಮನೆಯ ಬಳಿ ಬಂದಾಗ ಏಕಾಏಕಿ ಗುಂಪು ಕಟ್ಟಿಕೊಂಡು, ದೊಣ್ಣೆಗಳನ್ನು ಇಟ್ಟುಕೊಂಡು ನವೀನ್ ಕುಮಾರ್ ರವರು ನನ್ನ ತಲೆಗೆ ದೊಣ್ಣೆಯಿಂದ ಹೊಡೆದಿರುತ್ತಾರೆ. ನಂತರ ವಿಜಯ್ ಕುಮಾರ್ ರವರು ದೊಣ್ಣೆಯಲ್ಲಿ ನನ್ನ ತಲೆಗೆ ಹೊಡೆದಿರುತ್ತಾರೆ, ನಾನು ಪ್ರಜ್ಞೆ ತಪ್ಪಿ ನೆಲದ ಮೇಲೆ ಬಿದ್ದಿರುತ್ತೇನೆ. ಸ್ವಲ್ಪ ಸಮಯದ ನಂತರ ಎದ್ದು ನೋಡಿದಾಗ ನನ್ನ ಚಿಕ್ಕಪ್ಪ ಬಿದ್ದು ಹೋಗಿದ್ದು, ಆತನಿಗೂ ಸಹ ತಲೆಗೆ ರಕ್ತಗಾಯಾಳಾಗಿದ್ದವು, ಅವರು ರಕ್ತದ ವಾಂತಿಯನ್ನು ಮಾಡುತ್ತಿದ್ದರು. ನಂತರ ಹನುಮಂತರಾಯಪ್ಪ ಮತ್ತು ಸುರೇಶ್ ರವರು ನಮ್ಮನ್ನು ಗೌರಿಬಿದನೂರು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ನನ್ನ ತಂದೆಯವರ ಕಾಲು, ಸೊಂಟಕ್ಕೆ ರಾಮಾಂಜಿನಪ್ಪ ಮತ್ತು ರಾಧಮ್ಮ ರವರು ಹೊಡೆದಿದ್ದರು. ನನ್ನ ಹೆಂಡತಿಯ ಹೊಟ್ಟೆ ಭಾಗಕ್ಕೂ ಸಹ ರಾಧಮ್ಮರವರು ಹೊಡೆದಿದ್ದರು. ಪೊಡಿ ಮಾಡಲು ಹೋದಾಗ ನಿಮ್ಮನ್ನು ಮುಗಿಸಿಬಿಡುತ್ತೇವೆ ಎಂದು ಕೊಲೆ ಬೆದರಿಕೆ ಹಾಕಿದ್ದರು.

| | |
|---|---|
| ಪ್ರಾಸಾ | 01 |
| ಚಾಸಾ | 01 |

3. ನಾನು ಆಸ್ಪತ್ರೆಯಲ್ಲಿದ್ದ ಸಮಯ ಪೊಲೀಸರು ಆಸ್ಪತ್ರೆಗೆ ಭೇಟಿ ನೀಡಿದ್ದರು, ಆಗ ಅವರಿಗೆ ದೂರನ್ನು ಹೇಳಿಕೆ ರೂಪದಲ್ಲಿ ದೂರನ್ನು ನೀಡಿರುತ್ತೇನೆ. ಹೇಳಿಕೆಯನ್ನು ನೋಡಿದರೆ ಗುರುತಿಸುತ್ತೇನೆ. ಹೇಳಿಕೆಯನ್ನು ನಿಪಿ 1 ಎಂದು, ಸಾಕ್ಷಿ ಸಹಿಯನ್ನು ನಿಪಿ 1(ಎ) ಎಂದು ಗುರುತಿಸಲಾಯಿತು. ನಂತರ ಸದರಿ ಆಸ್ಪತ್ರೆಯಲ್ಲಿ ಹೆಚ್ಚಿನ ಚಿಕಿತ್ಸೆ ನಮ್ಮಲ್ಲಿ ಸಾಧ್ಯವಿಲ್ಲ ಎಂದು ತಿಳಿಸಿದ್ದು, ಚಿಕ್ಕಬಳ್ಳಾಪುರ ಜಿಲ್ಲಾ ಆಸ್ಪತ್ರೆಗೆ ಬಂದಿದ್ದೇವು. ಅಲ್ಲಿಯೂ ಸಹ ಚಿಕಿತ್ಸೆ ನೀಡಲು ಸಾಧ್ಯವಿಲ್ಲ ಎಂದ ಕಾರಣ ಹೆಚ್ಚಿನ ಚಿಕಿತ್ಸೆಗೆ ನನ್ನನ್ನು ನಿಮಾನ್ಸ್ ಗೆ ಆಸ್ಪತ್ರೆಗೆ ನನ್ನ ಭಾವನವರಾದ ನರಸಿಂಹಮೂರ್ತಿ ಮತ್ತು ಸುರೇಶ್ ರವರು ಕರೆದುಕೊಂಡು ಹೋಗಿದ್ದರು. ನಾನು ನಿಮಾನ್ಸ್ ನಲ್ಲೆ ಚಿಕಿತ್ಸೆ ಪಡೆದಿದ್ದೆ, ನನ್ನ ಚಿಕ್ಕಪ್ಪನಿಗೆ ನಿಮಾನ್ಸ್ ನಲ್ಲಿ ಚಿಕಿತ್ಸೆ ನೀಡಲು ಸಾಧ್ಯವಿಲ್ಲ ಎಂದು ತಿಳಿಸಿದ ಮೇರೆಗೆ ಅವರು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತಾರೆ. ಚಿಕಿತ್ಸೆ ಪಡೆಯುತ್ತಿದ್ದ ಸಂದರ್ಭದಲ್ಲಿ ನನ್ನ ಚಿಕ್ಕಪ್ಪನ ಮಗ ನನಗೆ ಕರೆ ಮಾಡಿ ಸುಮಾರು ರಾತ್ರಿ 2.45 ಗಂಟೆಗೆ ಅಪ್ಪ ತೀರಿಕೊಂಡಿದ್ದಾರೆ ಎಂದು ತಿಳಿಸಿದ್ದರು. ನಂತರ ನಾನು ಚಿಕಿತ್ಸೆ ಪಡೆದ ನಂತರ ಗೌರಿಬಿದನೂರು ಪೊಲೀಸ್ ಠಾಣೆಗೆ ಹೋಗಿ ಮರುದೂರನ್ನು ನೀಡಿರುತ್ತೇನೆ. ಸದರಿ ಮರುದೂರನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ಮರುದೂರನ್ನು ನಿಪಿ 2 ಎಂದು, ಸಾಕ್ಷಿ ಸಾಹಿಯನ್ನು ನಿಪಿ 2(ಎ) ಎಂದು ಗುರುತಿಸಲಾಯಿತು.

| | |
|---|---|
| ಪ್ರಾಸಾ | 01 |
| ಚಾಸಾ | 01 |

4. ನ್ಯಾಯಾಲಯದ ಅನುಮತಿ ಮೇರೆಗೆ ವಿಶೇಷ ಸರ್ಕಾರಿ ಅಭಿಯೋಜಕರು ಹಾಗೂ ಆರೋಪಿತರ ಸಮಕ್ಷಮ ತನಿಖಾಧಿಕಾರಿ ಅಮಾನತ್ತು ಪಡಿಸಿಕೊಂಡಿದ್ದ ಬಿಳಿ ಬಟ್ಟೆಯಿಂದ ಸುತ್ತಿದ್ದ ಮೂರು ಪ್ಯಾಕ್ ಗಳನ್ನು ತೆಗೆದುಕೊಡಲಾಗಿ ಒಂದರಲ್ಲಿ ಎರಡು ಮರದ ದೊಣ್ಣೆಗಳಿದ್ದು, ಅವುಗಳನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಸದರಿ ದೊಣ್ಣೆಗಳನ್ನು ಚೇತನ್ ಕುಮಾರ್ ಮತ್ತು ನವೀನ್ ಕುಮಾರ್ ರವರು ಕೃತ್ಯದ ಸಮಯ ಉಪಯೋಗಿಸಿದ್ದರು, ಎಂದು ನುಡಿಯುತ್ತಾರೆ. ಚೇತನ್ ಕುಮಾರ್ ರವರು ಉಪಯೋಗಿಸಿದ್ದ ದೊಣ್ಣೆಯನ್ನು ಮು. ಮಾ 1 ಎಂದು, ನವೀನ್ ಕುಮಾರ್ ರವರು ಉಪಯೋಗಿಸಿದ ದೊಣ್ಣೆಯನ್ನು ಮು. ಮಾ 2 ಎಂದು ಗುರುತಿಸಲಾಯಿತು. ಇನ್ನೊಂದು ಪೊಟ್ಟಣವನ್ನು ತೆರೆದು ನೋಡಲಾಗಿ ಅದರಲ್ಲಿ ಒಂದು ದೊಣ್ಣೆಯಿದ್ದು, ಅದನ್ನು ವಿಜಯಕುಮಾರ್ ರವರು ಕೃತ್ಯದ ಸಮಯದಲ್ಲಿ ಉಪಯೋಗಿಸಿದ್ದರು ಎಂದು ಗುರುತಿಸಿರುತ್ತಾರೆ. ಅದನ್ನು ಮು. ಮಾ 3 ಎಂದು ಗುರುತಿಸಲಾಯಿತು. ಇನ್ನೊಂದು ಪೊಟ್ಟಣವನ್ನು ತೆರೆದು ನೋಡಲಾಗಿ ಅದರಲ್ಲಿ ಒಂದು ದೊಣ್ಣೆಯಿದ್ದು, ಅದನ್ನು ಮಂಜುನಾಥ್ ರವರು ಕೃತ್ಯದ ಸಮಯದಲ್ಲಿ ಉಪಯೋಗಿಸಿದ್ದರು ಎಂದು ಗುರುತಿಸಿರುತ್ತಾರೆ. ಅದನ್ನು ಮು. ಮಾ 4 ಎಂದು ಗುರುತಿಸಲಾಯಿತು. ಇನ್ನೊಂದು ಪೊಟ್ಟಣವನ್ನು ತೆರೆದು ನೋಡಲಾಗಿ ಅದರಲ್ಲಿ ಕಪ್ಪು ಮತ್ತು ಗ್ರೇ ಕಲರ್ ಡಿಸೈನ್ ನ ರಕ್ತ ಕಲೆಯಿರುವ

| | |
|---|---|
| ಪ್ರಾಸಾ | 01 |
| ಚಾಸಾ | 01 |

ಒಂದು ಟೀ ಶರ್ಟ್ ಇದ್ದು, ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ಟೀ ಶರ್ಟ್ ನ್ನು ನಾನು ಕೃತ್ಯದ ಸಮಯ ಧರಿಸಿದ್ದೆ ಎಂದು ನುಡಿಯುತ್ತಾರೆ. ಅದನ್ನು ಮು. ಮಾ 5 ಎಂದು ಗುರುತಿಸಲಾಯಿತು. ಇನ್ನೊಂದು ಪೊಟ್ಟಣವನ್ನು ತೆರೆದು ನೋಡಲಾಗಿ ಅದರಲ್ಲಿ ರಕ್ತದ ಕಲೆಯಿರುವ ಒಂದು ಬನಿಯನ್ ಇದ್ದು, ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ಬನಿಯನ್ ನ್ನು ನಾನು ಕೃತ್ಯದ ಸಮಯ ಧರಿಸಿದ್ದೆ ಎಂದು ನುಡಿಯುತ್ತಾರೆ. ಅದನ್ನು ಮು. ಮಾ 6 ಎಂದು ಗುರುತಿಸಲಾಯಿತು.

5. ಸದರಿ ದಿನ ನಮ್ಮಗಳ ಮೇಲೆ ಹಲ್ಲೆ ಮಾಡಿರುವ ಮತ್ತು ನಂಜುಂಡಪ್ಪರವರನ್ನು ಕೊಲೆ ಮಾಡಿರುವ ವ್ಯಕ್ತಿಗಳು ಈ ದಿನ ನ್ಯಾಯಾಲಯದಲ್ಲಿರುವ ಆರೋಪಿತರು ಹಾಗೂ ವಿ.ಸಿ. ಮುಖಾಂತರ ಹಾಜರುಪಡಿಸಿದ ಆರೋಪಿತರಾಗಿರುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ.ಹೆಚ್.ಆರ್.ವಿ ವಕೀಲರಿಂದಃ**

6. ನಾನು ಆಸ್ಪತ್ರೆಗೆ ಹೋಗಿದ್ದಾಗ ನನಗೆ ಪ್ರಜ್ಞೆ ಇತ್ತು. ಯಾವ ಯಾವ ಆರೋಪಿತರ ಕೈಯಲ್ಲಿ ಯಾವ ಯಾವ ದೊಣ್ಣೆ ಇತ್ತು ಎಂಬ ಬಗ್ಗೆ ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ. ಅದೇ ರೀತಿ ಸದರಿ ದೊಣ್ಣೆಗಳನ್ನು ನೋಡಿದರೆ ಗುರುತಿಸುತ್ತೇನೆ ಎಂದು ಹೇಳಿಕೆ ನೀಡಿರುತ್ತೇನೆ. ದಿಃ 19.08.2024 ರಂದು ನೀಡಿದ

| | |
|---|---|
| ಪ್ರಾಸಾ | 01 |
| ಚಾಸಾ | 01 |

ಹೇಳಿಕೆಯಲ್ಲಿ ಹೇಳಿರುತ್ತೇನೆ. ಪೊಲೀಸರು ಸದರಿ ದೊಣ್ಣೆಗಳನ್ನು ನನಗೆ ತೋರಿಸಿ ಇವೇ ಕೃತ್ಯದ ಸಮಯ ಉಪಯೋಗಿಸಿದ್ದು ಎಂದು ಪೊಲೀಸರು ದಿಃ 19.08.2024 ರಂದು ಖಾತ್ರಿ ಪಡಿಸಿಕೊಂಡಿಕೊಂಡಿದ್ದರು. ನಮ್ಮ ಮನೆಯ ಬಳಿಯೇ ಪೊಲೀಸರು ಅವುಗಳನ್ನು ತೋರಿಸಿದ್ದರು. ಪೊಲೀಸರು ದೊಣ್ಣೆಗಳನ್ನು ತೋರಿಸುವಾಗ ಪ್ಯಾಕ್ ಮಾಡಿರಲಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಮು. ಮಾ 1 ರಿಂದ 4 ನ್ನು ಯಾವ ಯಾವ ಆರೋಪಿತರು ಉಪಯೋಗಿಸಿದ್ದರು ಎನ್ನುವ ಬಗ್ಗೆ ದಿಃ 19.08.2024 ರಂದು ತಿಳಿಸಿರುತ್ತೇನೆ. ಗೌರಿಬಿದನೂರು ಆಸ್ಪತ್ರೆಗೆ 1.00 ಗಂಟೆಗೆ ಹೋಗಿ ಅರ್ಧ ಗಂಟೆ ಇದ್ದೇವು. ಚಿಕ್ಕಬಳ್ಳಾಪುರ ಜಿಲ್ಲಾ ಆಸ್ಪತ್ರೆಯಲ್ಲಿ ಅರ್ಧ ಗಂಟೆ ಇದ್ದೇವು. ನಿಮಾನ್ಸ್ ನಲ್ಲಿ ದಿಃ 18 ನೇ ತಾರೀಖು ಸಂಜೆ 6.00 ಗಂಟೆಗೆ ಕರೆದುಕೊಂಡು ಹೋಗಿ ಚೆಕಪ್ ಮಾಡಿಸಿ ರಾತ್ರಿ 3.00 ಗಂಟೆವರೆಗೂ ಹೊರರೋಗಿಯಾಗಿ ಚಿಕಿತ್ಸೆ ಪಡೆದಿರುತ್ತೇನೆ. ಪೊಲೀಸರು ಗೌರಿಬಿದನೂರು ಆಸ್ಪತ್ರೆಯಲ್ಲಿ ನನ್ನ ಹೇಳಿಕೆ ಪಡೆದುಕೊಂಡಿರುತ್ತಾರೆ. ಸದರಿ ಸಂಧರ್ಭದಲ್ಲಿ ದೊಣ್ಣೆಗಳ ಬಗ್ಗೆ ಹೇಳಿರುವುದಿಲ್ಲ. ನನ್ನ ಚಿಕ್ಕಪ್ಪ ತೀರಿಕೊಂಡಾಗ 4 ದೊಣ್ಣೆಗಳ ಬಗ್ಗೆ ಹೇಳಿಲ್ಲ, ಮೊದಲೆ ಹೇಳಿದ್ದೆ ಎಂದು ನುಡಿಯುತ್ತಾರೆ. ನನ್ನ ಚಿಕ್ಕಪ್ಪನ ಮೇಲೆ ಹಲ್ಲೆ ಮಾಡಿದ್ದು ಕಂಬಾಲಹಳ್ಳಿ ಸರ್ವೆ ನಂಬರ್ ಗೆ

| | |
|---|---|
| ಪ್ರಾಸಾ | 01 |
| ಚಾಸಾ | 01 |

ಸಂಬಂಧಿಸಿದಾಗಿರುತ್ತದೆ. ನಮ್ಮ ಮೇಲೆ ನಡುವನಹಳ್ಳಿ ಗ್ರಾಮಕ್ಕೆ ಸಂಬಂಧಿಸಿದಂತೆ ಗಲಾಟೆಯಾಗಿರುತ್ತದೆ.

ಸಮಯ 1.50 ಗಂಟೆಯಾದ್ದರಿಂದ ಮುಂದುವರೆದ ಪಾಟೀ ಸವಾಲನ್ನು ಮದ್ಯಾಹ್ನಕ್ಕೆ ಮುಂದೂಡಲಾಯಿತು.

**(ದಿನಾಂಕ: 20.08.2025 ರಂದು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓದಿ ಹೇ ಕೇ ಸರಿ ಇದೆ**

**(ಕಾಂತರಾಜು.ಎಸ್.ವಿ.)**
**1 ನೇ ಹೆಚ್ಚುವರಿ ಜಿಲ್ಲಾ ಮತ್ತು (ವಿಶೇಷ) ಸತ್ರ ನ್ಯಾಯಾಧೀಶರು,**
**ಚಿಕ್ಕಬಳ್ಳಾಪುರ.**

| | |
|---|---|
| ಪ್ರಾಸಾ | 01 |
| ಚಾಸಾ | 01 |

**ಸಾಕ್ಷಿಯನ್ನು ಪುನಃ ಕರೆಯಿಸಿ ಮಧ್ಯಾಹ್ನ 3.25 ಗಂಟೆಗೆ ಪ್ರಮಾಣ ವಚನ ಮಾಡಿಸಲಾಯಿತು.**

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ.ಹೆಚ್.ಆರ್.ವಿ ವಕೀಲರಿಂದಃ</u>**

7. ನಮ್ಮ ಮನೆ ಮತ್ತು ರಾಮಾಂಜಿನಪ್ಪರವರ ಮನೆಗೆ ಒಂದು ಗೋಡೆ ಅಡ್ಡ. ನಂಜುಂಡಪ್ಪರವರ ಮನೆ ನಮ್ಮ ಮನೆಗೆ 500 ಮೀಟರ್ ಅಂತರ ಇರುತ್ತದೆ. 1 ನೇ ಆರೋಪಿ-ಮಂಜುನಾಥ್ ಮತ್ತು 4 ನೇ ಆರೋಪಿ-ಮಾರುತಿ ಸುಮಾರು 20-30 ವರ್ಷಗಳಿಂದ ಬೆಂಗಳೂರಿನಲ್ಲಿ ವಾಸವಿರುತ್ತಾರೆ ಎಂದರೆ ಸರಿ. ಸದರಿಯವರಿಗೆ ನಮ್ಮ ಊರಿನಲ್ಲಿ ಸ್ವಂತ ಮನೆ ಇದೆ. ಸಾಕ್ಷಿಗೆ ನಿಮ್ಮ ಮನೆ ಅವರ ಮನೆಗೆ ಎಷ್ಟು ದೂರದಲ್ಲಿದೆ ಎಂದರೆ ಸಾಕ್ಷಿ ಒಂದು ಗೋಡೆ ಅಡ್ಡ, ನಮ್ಮ ಮನೆ ಮತ್ತು ರಾಮಾಂಜಿನಪ್ಪರವರ ಮನೆ ಹಾಗೂ ಅವರುಗಳ ಮನೆ ಜಂಟಿಯಲ್ಲಿವೆ ಎಂದು ನುಡಿಯುತ್ತಾರೆ. 1 ನೇ ಆರೋಪಿ-ಮಂಜುನಾಥ್ ಮತ್ತು 4 ನೇ ಆರೋಪಿ-ಮಾರುತಿ ರವರುಗಳ ಹೆಂಡತಿ-ಮಕ್ಕಳು ಬೆಂಗಳೂರಿನಲ್ಲಿ ವಾಸವಿರುತ್ತಾರೆ. 6 ನೇ ಆರೋಪಿ ಚೇತನ್ ನಮ್ಮ ಊರಿನವರಲ್ಲ ಎಂದರೆ ಸರಿ. ಅವರು ಎಲ್ಲಿ ವಾಸವಿರುತ್ತಾರೆ ಎಂದರೆ ಸಾಕ್ಷಿಯು ಮೂರು ದಿವಸ ಅವರ ದೊಡ್ಡಮ್ಮನ ಮನೆಯಲ್ಲಿ ಮತ್ತು ಮೂರು ದಿವಸ ಅವರ ತಾತನ ಮನೆಯಲ್ಲಿರುತ್ತಾರೆಂದು ನುಡಿಯುತ್ತಾರೆ. ಅವರ ತಾತನ ಊರು ಕೋನಗಾನಹಳ್ಳಿ. ನಡುವನಹಳ್ಳಿಗೂ ಮತ್ತು ಕೋನಗಾನಹಳ್ಳಿಗೂ ಒಂದು ಕಿ. ಮೀಟರ್ ದೂರ ಇರುತ್ತದೆ. 2 ನೇ ಆರೋಪಿ-ವಿಜಯ್ ಕುಮಾರ್ ನಮ್ಮ ಊರಿನವರಲ್ಲ ಎಂದರೆ ಸರಿ. ನಮ್ಮ ಮನೆಯ ಅಕ್ಕ ಪಕ್ಕ-ಲಕ್ಷ್ಮಪ್ಪ ಮತ್ತು

| ಪ್ರಾಸಾ | 01 |
|---|---|
| ಚಾಸಾ | 01 |

ರೊದ್ದಪ್ಪ ರವರ ಮನೆಗಳು ಇವೆ ಎಂದರೆ ಸರಿ. ಅವರ ಹೆಂಡತಿ ಮಕ್ಕಳೆಲ್ಲಾ ಅಲ್ಲೆ ವಾಸವಿರುತ್ತಾರೆ ಎಂದರೆ ಸರಿ. ಗಲಾಟೆಯಾಯಿತು ಎಂದು ಹೇಳಲಾದ ಸಮಯಕ್ಕೆ ಸದರಿ ಮನೆಯವರಾರು ಬರಲಿಲ್ಲ. ಲಕ್ಷ್ಮಪ್ಪ ಮತ್ತು ರೊದ್ದಪ್ಪರವರ ಮನೆಯವರು ನಮ್ಮ ಜೊತೆ ಚೆನ್ನಾಗಿರುತ್ತಾರೆ ಎಂದರೆ ಸರಿಯಲ್ಲ. ಸದರಿಯವರ ಬಗ್ಗೆ ನಮಗೆ ಚೆನ್ನಾಗಿಲ್ಲ ಎಂಬ ಬಗ್ಗೆ ಪೊಲೀಸರಿಗೆ ನಾನು ಹೇಳಿರುವುದಿಲ್ಲ. ನಿಪಿ 1 ರಲ್ಲಿ "ಜಮೀನು ಸ್ವಾಧೀನವನ್ನು ಬಿಡುವಂತೆ ಕೇಳಿದರೆ ನಿಮ್ಮನ್ನು ಮುಗಿಸಿಬಿಡುತ್ತೇವೆ ಎಂದು ಕೊಲೆ ಬೆದರಿಕೆ ಹಾಕಿದರು" ಎಂದು ಹೇಳಿರುವ ಜಮೀನು ಯಾವುದು, ಯಾರು ಸ್ವಾಧೀನದಲ್ಲಿದ್ದಾರೆ ಎನ್ನುವ ವಿಚಾರ ಪೊಲೀಸರಿಗೆ ಹೇಳಿದ್ದೀರಾ ಎಂದರೆ ಸಾಕ್ಷಿಯು ಹೇಳಿಲ್ಲ ಎಂದು ನುಡಿಯುತ್ತಾರೆ.

8. ನಮ್ಮ ಹೊಲಕ್ಕೂ ಮನೆಗೂ ಸುಮಾರು 100 ಮೀಟರ್ ಅಂತರ ಇರುತ್ತದೆ. ಸದರಿ ಹೊಲ ನಮ್ಮ ಮನೆಯಿಂದ ಕಾಣುತ್ತದೆ ಮತ್ತು ಗಲಾಟೆಯಾದರೆ ಕೇಳಿಸುತ್ತದೆ. ಮೃತ ನಂಜುಂಡಪ್ಪರವರ ಮನೆಯಲ್ಲಿ ನಂಜಮ್ಮ, ಮೂರ್ತಿ, ನಂದಿನಿ ಹಾಗೂ ಮೊಮ್ಮಕ್ಕಳಾದ ಗೌತಮಿ, ತನುಗೌಡ ರವರುಗಳು ವಾಸವಿರುತ್ತಾರೆ. ನಮ್ಮ ಮನೆಯಿಂದ ಮೃತ ನಂಜುಂಡಪ್ಪರವರ ಮನೆ ಕಾಣುವುದಿಲ್ಲ. ಮೊದಲನೆ ಘಟನೆ ನಡೆಯಿತು ಎನ್ನಲಾದ ನಂತರ ನಂಜುಂಡಪ್ಪರವರು ಎಲ್ಲಿಗೆ ಹೋದರು ಎಂದು ಪೊಲೀಸರಿಗೆ ಹೇಳಿರುವುದಿಲ್ಲ. ಮೃತ ನಂಜುಂಡಪ್ಪರವರನ್ನು ಎಲ್ಲಿಂದ ಕರೆದುಕೊಂಡು ಬಂದಿದ್ದು ಎಂದು ನೀವು ಪೊಲೀಸರಿಗೆ ಹೇಳಿದ್ದೀರಾ ಎಂದರೆ ಸಾಕ್ಷಿಯು ನಾನು ಮನೆಯಿಂದ ಕರೆದುಕೊಂಡು ಬಂದೆ ಎಂದು ಪೊಲೀಸರಿಗೆ

| | |
|---|---|
| ಪ್ರಾಸಾ | 01 |
| ಚಾಸಾ | 01 |

ಹೇಳಿರುತ್ತೇನೆಂದು ನುಡಿಯುತ್ತಾರೆ. ಸದರಿ ನಂಜುಂಡಪ್ಪರವರು ಕೇಸನ್ನು ನಡೆಸಬೇಕೆಂದು ಮುಂದಾಳಾತ್ವ ವಹಿಸಬೇಕೆಂದು ನನ್ನ ದೊಡ್ಡಪ್ಪ-ಹನುಮಂತರಾಯಪ್ಪರವರು ಹೇಳಿದ್ದರು. ಅದಕ್ಕೆ **1** ನೇ ಆರೋಪಿ-ಮಂಜುನಾಥ ಮತ್ತು **5** ನೇ ಆರೋಪಿ-ರಾಮಾಂಜಿನಪ್ಪರವರು ಸಹ ನಂಜುಂಡಪ್ಪರವರಿಗೆ ಹೇಳಿದ್ದರು. ಸದರಿ ವಿಚಾರ ನನಗೆ **2024** ರಲ್ಲಿ ಗೊತ್ತಾಗಿರುತ್ತದೆ. ಅದನ್ನು ನನ್ನ ತಂದೆ ರಾಮಕೃಷ್ಣಪ್ಪರವರು ನನಗೆ ತಿಳಿಸಿರುತ್ತಾರೆ. ನನ್ನ ತಂದೆಯ ಅಣ್ಣ ತಮ್ಮಂದಿರಿಗೆ **2016** ರಲ್ಲಿ ಜಮೀನುಗಳು ಭಾಗಗಳಾಗಿರುತ್ತವೆ. ಆ ಪ್ರಕಾರ **2016** ರಿಂದ ಅವರವರ ಭಾಗಗಳಿಗೆ ಹೋಗಿದಂತಹ ಅಸ್ತಿಗಳಲ್ಲಿ ಅವರವರ ಸ್ವಾಧೀನಾನುಭವದಲ್ಲಿ ಬೆಳೆಗಳನ್ನು ಬೆಳೆದುಕೊಂಡು ಇರುತ್ತಾರೆ ಎಂದರೆ ಸರಿ.

9. ಪೊಲೀಸರು ಮದ್ಯಾಹ್ನ **1.00** ಗಂಟೆಗೆ ಗೌರಿಬಿದನೂರು ಆಸ್ಪತ್ರೆಗೆ ಬಂದಿದ್ದರು, ಅರ್ಧ ಗಂಟೆ ಅಲ್ಲೇ ಇದ್ದರು. ನಾವು ಚಿಕ್ಕಬಳ್ಳಾಪುರ ಜಿಲ್ಲಾ ಆಸ್ಪತ್ರೆಗೆ ಹೋಗುವವರೆಗೂ ಅಲ್ಲೇ ಇದ್ದರು. ಪ್ರಜ್ಞೆ ತಪ್ಪಿ ಬಿದ್ದು ಹೋದ ವಿಚಾರ ಮತ್ತು ಚೇತರಿಸಿಕೊಂಡ ವಿಚಾರ ಪೊಲೀಸರಿಗೆ ನೀಡಿದ ಹೇಳಿಕೆಯಲ್ಲಿ ಹೇಳಿರುತ್ತೇನೆ. ಮು. ಮಾ-**5** ಮತ್ತು **6** ಕ್ಕೆ ರಕ್ತ ತಾಗಿದೆ ಎನ್ನುವ ಬಗ್ಗೆ ನಿಪಿ **1** ಮತ್ತು **2** ರಲ್ಲಿ ಹೇಳಿರುತ್ತೇನೆ. ದಿಃ **06.09.2024** ರಂದು ಬಟ್ಟೆಗಳನ್ನು ನೀಡಿರುತ್ತೇನೆ. ಪೊಲೀಸರು ದೊಣ್ಣೆಗಳನ್ನು ಮನೆಯ ಬಳಿ ತೋರಿಸಿದಾಗ ಮು. ಮಾ **5** ಮತ್ತು **6** ನ್ನು ಪೊಲೀಸರಿಗೆ ನೀಡಲು ತೊಂದರೆ ಇತ್ತಾ ಎಂದರೆ ಇರಲಿಲ್ಲ ಎಂದು ನುಡಿಯುತ್ತಾರೆ.

| | |
|---|---|
| ಪ್ರಾಸಾ | 01 |
| ಚಾಸಾ | 01 |

10. ಪೊಲೀಸರು ದೊಣ್ಣೆಗಳನ್ನು ನಮ್ಮ ತೋರಿಸಿದಾಗ ಯಾವುದೇ ಮಹಜರ್ ಕ್ರಮ ಜರುಗಿಸಿರುವುದಿಲ್ಲ. ಘಟನೆಯಾದ ಮರುದಿನ ಪೊಲೀಸರು ಸುಮಾರು **10-00** ರಿಂದ **11.00** ಗಂಟೆ ಸಮಯದಲ್ಲಿ ಬಂದಿದ್ದರು ಎಂದು ಹೇಳುತ್ತಾರೆ. ಪೊಲೀಸರು ಬಂದಿದ್ದ ಸಮಯ ನನ್ನ ಅತ್ತಿಗೆ ಮಮತ ಮತ್ತು ಅಣ್ಣ ಕುಮಾರ್ ರವರು ಇದ್ದರು. ನನ್ನ ಟೀಶರ್ಟ್ ಮತ್ತು ಬನಿಯನ್ ಗೆ ಯಾವ ಭಾಗದಲ್ಲಿ ರಕ್ತದ ಕಲೆಗಳಾಗಿವೆ ಎಂಬ ಬಗ್ಗೆ ಪೊಲೀಸರಿಗೆ ಹೇಳಿರುತ್ತೇನೆ. ಸಾಕ್ಷಿಯು ತಲೆಯ ಬಲಭಾಗದಲ್ಲಿ ಹಲ್ಲೆಯಾಗಿದ್ದರಿಂದ ಬಲಭಾಗದ ತೋಳು ಮತ್ತು ಭುಜದ ಕಡೆ ರಕ್ತದ ಕಲೆಗಳಾಗಿರುತ್ತವೆ ಎಂದು ಹೇಳುತ್ತಾರೆ. ಬಟ್ಟೆಗಳನ್ನು ಹಾಜರು ಪಡಿಸುವಂತೆ ಪೊಲೀಸರು ಪೋನ್ ಮಾಡಿ ತಿಳಿಸಿದ್ದರು. ಅರ್ಚನರವರು ಕರೆ ಮಾಡುವ **10** ನಿಮಿಷಗಳ ಮೊದಲು ಆರೋಪಿತರು ಮನೆಯ ಬಳಿ ಬಂದಿದ್ದರು. ನಮ್ಮ ಮನೆಯಲ್ಲಿ ತಂದೆ-ರಾಮಕೃಷ್ಣಪ್ಪ, ತಾಯಿ-ಸರೋಜಮ್ಮ, ನಾನು ಮತ್ತು ನನ್ನ ಹೆಂಡತಿ-ಅರ್ಚನ ವಾಸವಿರುತ್ತೇವೆ. ಸಾಕ್ಷಿಗೆ ನೀವು ಹೋಗುವಷ್ಟರಲ್ಲಿ ಗಲಾಟೆಯಾಗಿತ್ತಾ ಅಥವಾ ಆಗಿರಲಿಲ್ಲವೆ ಎಂದರೆ ಸಾಕ್ಷಿಯು ಸದರಿ ದಿನ ಮೂರು ಬಾರಿ ಗಲಾಟೆಯಾಗಿರುತ್ತದೆ. ನಾನು ಹೋಗುವಷ್ಟರಲ್ಲಿ ಗಲಾಟೆ ಮೂರನೇ ಬಾರಿಯಾಗಿರುತ್ತದೆ. ಮೂರು ಬಾರಿ ಯಾವ ಯಾವ ಸಮಯದಲ್ಲಿ ಗಲಾಟೆಯಾಗಿದೆ ಎಂಬ ಬಗ್ಗೆ ಪೊಲೀಸರಿಗೆ ದೂರಿನಲ್ಲಿ ಹೇಳಿರುತ್ತೇನೆ.

| | |
|---|---|
| ಪ್ರಾಸಾ | 01 |
| ಚಾಸಾ | 01 |

11. ಸರ್ವೆ ನಂ : 43 ನಡುವನಹಳ್ಳಿ ಗ್ರಾಮಕ್ಕೆ ಸಂಬಂಧಿಸಿದಂತೆ ಆಗಾಗ್ಗೆ ಗಲಾಟೆಯಾಗುತ್ತಿದ್ದ ಬಗ್ಗೆ ಪೊಲೀಸರಿಗೆ ದೂರನ್ನು ನೀಡಿರಲಿಲ್ಲ. ಜಮೀನನ್ನು ಮಾರಾಟ ಮಾಡಿ ಬಂದ ಹಣವನ್ನು ಹಂಚಿಕೊಳ್ಳೋಣ ಎಂದು ನಂಜುಂಡಪ್ಪರವರು ಹೇಳಿದ ವಿಚಾರದ ಬಗ್ಗೆ ನನ್ನ ತಂದೆಯ ಅಣ್ಣ-ತಮ್ಮಂದಿರನ್ನು ಕರೆದು ಹೇಳಿರುವುದಿಲ್ಲ. ನಾನು ಸದರಿ ಸ್ಥಳಕ್ಕೆ ಹೋದ ಮೇಲೆ ಯಾರ ಯಾರ ಕೈಯಲ್ಲಿ ದೊಣ್ಣೆಗಳಿದ್ದವು ಎಂಬ ಬಗ್ಗೆ ಪೊಲೀಸರಿಗೆ ಹೇಳಿರುತ್ತೇನೆ. ನಿಪಿ1 ಮತ್ತು 2 ರಲ್ಲಿ 4 ದೊಣ್ಣೆಗಳಿಂದ ಹಲ್ಲೆ ಮಾಡಿದ್ದಾರೆ ಎಂಬ ಬಗ್ಗೆ ಹೇಳಿರುತ್ತೇನೆ. ನಾನು ಸ್ಥಳಕ್ಕೆ ಹೋದ 10 ನಿಮಿಷದಲ್ಲಿ ಹೊಡೆದಿದ್ದರಿಂದ ನಾನು ಪ್ರಜ್ಞೆ ತಪ್ಪಿರುತ್ತೇನೆ, 5 ನಿಮಿಷದ ನಂತರ ನನಗೆ ಪ್ರಜ್ಞೆ ಬಂದಿರುತ್ತದೆ. ನಂಜುಂಡಪ್ಪರವರು ರಕ್ತದ ವಾಂತಿ ಮಾಡಿಕೊಳ್ಳುತ್ತಿದ್ದ ಬಗ್ಗೆ ನಿಪಿ 1 ಮತ್ತು 2 ರಲ್ಲಿ ಹೇಳಿರುತ್ತೇನೆ. ಪೊಲೀಸರು ದೊಣ್ಣೆಗಳನ್ನು ತೋರಿಸಿದ ಸಮಯ ನಂಜುಂಡಪ್ಪರವರು ರಕ್ತದ ವಾಂತಿ ಮಾಡಿಕೊಂಡಿದ್ದ ಸ್ಥಳವನ್ನು ತೋರಿಸಿರುತ್ತೇನೆ ಆಗ ಪೊಲೀಸರು ಬರವಣಿಗೆ ಮಾಡಿಕೊಂಡಿರುತ್ತಾರೆ, ಆದರೆ ನನ್ನ ಸಹಿ ಪಡೆದಿರುವುದಿಲ್ಲ. ಸಾಕ್ಷಿಗೆ 4 ದೊಣ್ಣೆಗಳನ್ನು ಯಾರು, ಯಾವಾಗ ಪೊಲೀಸರಿಗೆ ಕೊಟ್ಟಿದ್ದು ಎಂದರೆ ಸಾಕ್ಷಿಯು ಮು. ಮಾ 1 ರಿಂದ 4 ದೊಣ್ಣೆಗಳನ್ನು ಪೊಲೀಸರಿಗೆ ಮನೆಯ ಬಳಿ ದಿಃ 19.08.2024 ರಂದು ಬೆಃ 10-00 ರಿಂದ 11.00 ಗಂಟೆ ನಾನೇ ನೀಡಿದ್ದೆನೆಂದು ನುಡಿಯುತ್ತಾರೆ. ಆ ಸಮಯದಲ್ಲಿ ನನ್ನ ತಾಯಿ, ಹೆಂಡತಿ ಹಾಗೂ ನನ್ನ ಅತ್ತೆ-ಲಕ್ಷ್ಮಮ್ಮ ಇದ್ದರು ಎಂದು ನುಡಿಯುತ್ತಾರೆ. ನಾಲ್ಕು ದೊಣ್ಣೆಗಳನ್ನು ತೆಗೆದುಕೊಂಡು ಹೋದಾಗ ಅವರು

| | |
|---|---|
| ಪ್ರಾಸಾ | 01 |
| ಚಾಸಾ | 01 |

ಪ್ಯಾಕ್ ಮಾಡಿರಲಿಲ್ಲ. ಮು. ಮಾ 1 ರಿಂದ 4 ಯಾವ ದಿನಾಂಕದಂದು, ಯಾರ ಸಮಕ್ಷಮ ಪ್ಯಾಕ್ ಮಾಡಲಾಗಿದೆ ಎನ್ನುವ ಬಗ್ಗೆ ನನಗೆ ತಿಳಿದಿರುವುದಿಲ್ಲ. ಗಲಾಟೆಯಾಯಿತು ಎನ್ನಲಾದ ದಿನ ಮೃತ ನಂಜುಂಡಪ್ಪರವರ ಮಗ ಮೂರ್ತಿ ಸ್ಥಳದಲ್ಲಿ ಇರಲಿಲ್ಲ. ಗಲಾಟೆಯಾಯಿತು ಎನ್ನಲಾದ ಸಮಯದಲ್ಲಿ ಮೃತ ನಂಜುಂಡಪ್ಪರವರ ಹೆಂಡತಿ ಮತ್ತು ನಂದಿನಿರವರು ಬೆಃ 11.00 ಗಂಟೆಗೆ ಬಂದಿದ್ದರು ಎಂದು ನುಡಿಯುತ್ತಾರೆ. ಮು. ಮಾ 5 ಮತ್ತು 6 ನ್ನು ನಾನು ಠಾಣೆಗೆ ಹೋಗಿ ಮದ್ಯಾಹ್ನ 2.00 ಗಂಟೆಗೆ ಹೋಗಿ ನೀಡಿರುತ್ತೇನೆ. ಆ ಸಮಯ ಠಾಣೆಯಲ್ಲಿ ಅರ್ಧ ಗಂಟೆ ಇದ್ದೆ. ನನ್ನ ಕುಟುಂಬಕ್ಕೂ ಮತ್ತು ಮೃತ ನಂಜುಂಡಪ್ಪರವರಿಗೆ ಆಗುತ್ತಿರಲಿಲ್ಲ ಎಂದರೆ ಸರಿಯಲ್ಲ. ಸದರಿ ದಿನ ಕೊರ್ಟ್ ನಲ್ಲಿ ಕೇಸನ್ನು ನಡೆಸುವ ವಿಚಾರಕ್ಕೆ ನಮ್ಮ ಕುಟುಂಬಕ್ಕೂ ಮತ್ತು ಮೃತ ನಂಜುಂಡಪ್ಪರವರ ಕುಟುಂಬಕ್ಕೂ ಸದರಿ ದಿನ ಗಲಾಟೆಯಾಯಿತು ಎಂದರೆ ಸರಿಯಲ್ಲ. ಸದರಿ ಗಲಾಟೆಯ ಸಂದರ್ಭದಲ್ಲಿ ನಾನೇ ನಂಜುಂಡಪ್ಪರವರಿಗೆ ಹಲ್ಲೆ ಮಾಡಿದ್ದೆ ಎಂದರೆ ಸರಿಯಲ್ಲ. ಸದರಿ ಗಲಾಟೆಯ ಸಂದರ್ಭದಲ್ಲಿ ನಂಜುಂಡಪ್ಪರವರ ಕುಟುಂಬದವರು ನನ್ನ ತಲೆಗೆ ಹೊಡೆದು ಗಾಯಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಮು. ಮಾ 1 ರಿಂದ 4 ದೊಣ್ಣೆಗಳನ್ನು ಆರೋಪಿತರು ಮನೆಯ ಬಳಿ ಬಿಸಾಡಿ ಹೋಗಿದ್ದರು. ಪೊಲೀಸರು ಸ್ಥಳಕ್ಕೆ ಬಂದಾಗ 4 ದೊಣ್ಣೆಗಳು ಅಲ್ಲಲ್ಲೆ ಬಿದ್ದಿದ್ದವು, ನಾನು ತೋರಿಸಿದಂತೆ ಅವರು ಅವುಗಳನ್ನು ತೆಗೆದುಕೊಂಡಿರುತ್ತಾರೆ. ಸದರಿ 4 ದೊಣ್ಣೆಗಳಿಗೂ ರಕ್ತ ಕಲೆಗಳಾಗಿದ್ದವೊ ಇಲ್ಲವೊ ಎಂಬ ಬಗ್ಗೆ ನಾನು ನೋಡಿರುವುದಿಲ್ಲ. ಪೊಲೀಸರು

| | |
|---|---|
| ಪ್ರಾಸಾ | 01 |
| ಚಾಸಾ | 01 |

ನಮಗೆ ಹೇಳಲೂ ಇಲ್ಲ ಕೇಳಲೂ ಇಲ್ಲ ಎಂದರೆ ಸರಿ. ನನ್ನ ಹೆಂಡತಿಗೆ, ನನ್ನ ತಾಯಿಗೆ ಆಗಿದಂತಹ ಗಾಯಗಳು ನಮ್ಮ ಕುಟುಂಬದವರಿಗೂ ಮತ್ತು ನಂಜುಂಡಪ್ಪರವರ ಕುಟುಂಬವು ಹೊಡೆದಾಡಿಕೊಂಡ ಸಂದರ್ಭದಲ್ಲಿ ಆದಂತಹವು ಎಂದರೆ ಸರಿಯಲ್ಲ. ಆಸ್ಪತ್ರೆಗೆ ಚಿಕಿತ್ಸೆಗೆ ಹೋದಾಗ ಯಾರು ಹಲ್ಲೆ ಮಾಡಿದ್ದರು, ಎಲ್ಲಿ ಹಲ್ಲೆಯಾಯಿತು ಎಂಬ ಬಗ್ಗೆ ವೈದ್ಯರಿಗೆ ಹೇಳಿರುವುದಿಲ್ಲ.

12. ಮುಂಜಾನೆ ಬೆಃ 7.00 ಗಂಟೆ ಸಮಯದಲ್ಲಿ ಬಾಯಿ ಮಾತಿನಲ್ಲಿ ಜಗಳ ಆಗಿದ್ದನ್ನು ಉಪಯೋಗಿಸಿಕೊಂಡು ನಾವು ನಂಜುಂಡಪ್ಪ ಮತ್ತು ಕುಟುಂಬದವರ ಮೇಲೆ ಹಲ್ಲೆ ಮಾಡಿದ್ದು, ನಮ್ಮ ಮೇಲೆ ಕೇಸು ದಾಖಲಾಗುತ್ತದೆ ಎಂದು ತಪ್ಪಿಸಿಕೊಳ್ಳಲು ಸದರಿ ಘಟನೆಯನ್ನು ಉಪಯೋಪಗಿಸಿಕೊಂಡು ಆರೋಪಿತರ ವಿರುದ್ದ ಸುಳ್ಳು ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಈ ಘಟನೆಗೂ ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ : ಇಲ್ಲ**

**(ದಿನಾಂಕಃ 20.08.2025 ರಂದು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓದಿ ಹೇ ಕೇ ಸರಿ ಇದೆ**

**(ಕಾಂತರಾಜು.ಎಸ್.ವಿ.)**
**1 ನೇ ಹೆಚ್ಚುವರಿ ಜಿಲ್ಲಾ ಮತ್ತು (ವಿಶೇಷ) ಸತ್ರ ನ್ಯಾಯಾಧೀಶರು,**
**ಚಿಕ್ಕಬಳ್ಳಾಪುರ.**